ಲಾಲ್‌ಬಾಗ್ ಸಿದ್ದಾಪುರದ ವಸತಿ ಗೃಹಗಳ ದುರಸ್ಥಿ.

558:(4028)

ಶ್ರೀ ಎಸ್.ಸುರೇಶ್‌ಕುಮಾರ್ (ರಾಜಾಜಿನಗರ): ಮಾನ್ಯ ಲೋಕೋಪಯೋಗಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಇತ್ತೀಚಿನ ಮಳೆಯಿಂದ ತೀವ್ರ ಹಾನಿಗೊಳಗಾದ ಲಾಲ್‌ಬಾಗ್ ಸಿದ್ದಾಪುರದ ವಸತಿಗೃಹಗಳನ್ನು ದುರಸ್ತಿಗೊಳಿಸಲು ಸಮೀಕ್ಷೆ ಮಾಡಲಾಗಿದೆಯೇ; ಹಾಗಿದ್ದಲ್ಲಿ ಯಾವಾಗ ಮಾಡಲಾಗಿದೆ?

ಆ) ಹಾಗಿಲ್ಲದಿದ್ದಲ್ಲಿ ಕೂಡಲೇ ಸಮೀಕ್ಷೆ ನಡೆಸಿ ದುರಸ್ತಿ ಕಾರ್ಯ ಕೈಗೊಳ್ಳಲಾಗುವುದೆ?

ಶ್ರೀ ಸಿ.ಎಂ.ಉದಾಸಿ (ಲೋಕೋಪಯೋಗಿ ಸಚಿವರು):

ಅ) ಹೌದು ಸಮೀಕ್ಷೆಯನ್ನು ದಿನಾಂಕ: 3-11-98ರ ವರೆಗೆ ನಡೆಸಲಾಗಿದೆ.

ಆ) ಇತ್ತೀಚಿನ ಮಳೆಯಿಂದ ಸಣ್ಣ ಬಿರುಕುಗಳು ಕಂಡು ಬಂದಿವೆ. ಇದಕ್ಕೆ ತಜ್ಞರಿಂದ ಸಲಹೆಯನ್ನು ಪಡೆದು ಅಂದಾಜನ್ನು ತಯಾರಿಸಿದ ನಂತರ ಸೂಕ್ತ ಕ್ರಮ ತೆಗೆದುಕೊಳ್ಳಲಾಗುವುದು.

ಮೈಸೂರು ನಗರದ ಪೋಲೀಸ್ ವಸತಿ ಗೃಹಗಳ ದುರಸ್ತಿ

559:(3935)

ಶ್ರೀ ಇ.ಮಾರುತಿರಾವ್ ಪವಾರ್ (ನರಸಿಂಹರಾಜ): ಮಾನ್ಯ ಲೋಕೋಪಯೋಗಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಮೈಸೂರು ನಗರದ ಜ್ಯೋತಿನಗರದ ಪೋಲೀಸ್ ವಸತಿಗೃಹ ಎ ಮತ್ತು ಬಿ ಬ್ಲಾಕ್ ಜಲಪುರಿ ಪೋಲೀಸ್ ವಸತಿಗೃಹ ಎ, ಬಿ ಮತ್ತು ಸಿ ಬ್ಲಾಕ್ ಹಾಗೂ 3ನೇ ಇನ್‌ಫೆಂಟ್ರಿ ಲೈನ್ ವಸತಿಗೃಹಗಳ ರಸ್ತೆ ಚರಂಡಿ ಹಾಗೂ ಒಳಚರಂಡಿಯು ಲೋಕೋಪಯೋಗಿ ಇಲಾಖೆ ವತಿಯಿಂದ ದುರಸ್ತಿಯಾಗದೆ ಸುಮಾರು 40 ವರ್ಷಗಳಿಂದ ನಾದುರಸ್ತಿಯಲ್ಲಿಯೇ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಆ) ಹಾಗಿದ್ದಲ್ಲಿ ಈ ಕಾಮಗಾರಿಗಳನ್ನು ಕೈಗೊಳ್ಳಲು ವಿಳಂಬ ಮಾಡುತ್ತಿರುವ ಅಧಿಕಾರಿಗಳ ಮೇಲೆ ಅಗತ್ಯ ಶಿಸ್ತು ಕ್ರಮ ಕೈಗೊಳ್ಳಲಾಗಿದೆಯೇ?

ಇ) ಅಲ್ಲಿನ ಜನತೆಗೆ ಅನಾನುಕೂಲ ಉಂಟಾಗುತ್ತಿರುವುದರಿಂದ ಕಾಮಗಾರಿಗಳನ್ನು ಯಾವಾಗ ಪ್ರಾರಂಭ ಮಾಡಲಾಗುವುದು ಹಾಗೂ ಯಾವಾಗ ಪೂರೈಸಲಾಗುವುದು?

ಶ್ರೀ ಸಿ.ಎಂ.ಉದಾಸಿ (ಲೋಕೋಪಯೋಗಿ ಸಚಿವರು):

ಅ) ಮೈಸೂರು ನಗರದ ಜ್ಯೋತಿನಗರದಲ್ಲಿರುವ ಪೋಲೀಸ್ ವಸತಿಗೃಹಗಳು ಈ ಕೆಳಕಂಡಂತಿವೆ.

ಬ್ಲಾಕ್ ಎ	-	195 ವಸತಿಗೃಹಗಳು
ಬ್ಲಾಕ್ ಬಿ	-	120 ವಸತಿಗೃಹಗಳು
ಒಟ್ಟು	-	315 ವಸತಿಗೃಹಗಳು

ಮೈಸೂರು ನಗರದ ಜಲಪುರಿಯ ಪೋಲೀಸ್ ವಸತಿಗೃಹಗಳು ಈ ಕೆಳಗಿನಂತಿರುತ್ತವೆ.

ಬ್ಲಾಕ್ ಎ	-	228 ವಸತಿಗೃಹಗಳು
ಬ್ಲಾಕ್ ಬಿ	-	256 ವಸತಿಗೃಹಗಳು
ಬ್ಲಾಕ್ ಸಿ	-	88 ವಸತಿಗೃಹಗಳು
ಒಟ್ಟು	-	572 ವಸತಿಗೃಹಗಳು

ಹಾಗೂ 3ನೇ ಇನ್‌ಫೆಂಟ್ರಿ ಸಾಲು ಮನೆಗಳು. ಈ ವಸತಿಗೃಹಗಳನ್ನು ಮಹಾರಾಜರ ಕಾಲದಲ್ಲಿ ನಿರ್ಮಿಸಿದ್ದು ಲಭ್ಯವಿರುವ ಸೀಮಿತ ವಾರ್ಷಿಕ ದುರಸ್ತಿ ಅನುದಾನದಲ್ಲಿ ನಿರ್ವಹಣೆಯನ್ನು ಮಾಡಲಾಗುತ್ತಿದೆ. ಸದರಿ ಒಳಚರಂಡಿ ವ್ಯವಸ್ಥೆಗಳಿಗೆ ಸುಧಾರಣೆ ಮಾಡಬೇಕಾಗಿರುವುದು ಸರ್ಕಾರದ ಗಮನಕ್ಕೆ ಬಂದಿರುತ್ತದೆ. ರಸ್ತೆ ಚರಂಡಿ ಮತ್ತು ಒಳಚರಂಡಿ ವ್ಯವಸ್ಥೆಗಳ ದುರಸ್ತಿಗಾಗಿ ಸುಮಾರು 15.00 ಲಕ್ಷ ರೂ.ಗಳ ವೆಚ್ಚ ತಗಲುವುದು.

ಆ) ಸದರಿಕಾಮಗಾರಿಗಳಿಗೆ ವಿಶೇಷ ಅನುದಾನ ಲಭ್ಯವಿಲ್ಲದ ಕಾರಣ ವಿಶೇಷ ದುರಸ್ತಿ ಕಾಮಗಾರಿಗಳನ್ನು ತೆಗೆದುಕೊಂಡಿರುವುದಿಲ್ಲ. ಈ ಪ್ರಯುಕ್ತ ವಿಳಂಬದ ಹಾಗೂ ಯಾವುದೇ ಅಧಿಕಾರಿಯ ಮೇಲೆ ಶಿಸ್ತು ಕ್ರಮ ಕೈಗೊಳ್ಳುವ ಪ್ರಶ್ನೆ ಉದ್ಭವಿಸುವುದಿಲ್ಲ.

ಇ) ಜ್ಯೋತಿನಗರ ಹಾಗೂ ಜಲಪುರಿಯಲ್ಲಿರುವ ಪೋಲೀಸ್ ವಸತಿಗೃಹಗಳು

ಮುಖ್ಯವಾಗಿ ಪೋಲೀಸ್ ಪೇದೆಗಳು ಮತ್ತು ಮುಖ್ಯ ಪೇದೆಗಳಿಗೆ ಹಂಚಿಕೆಯಾಗಿದ್ದು, ಇವುಗಳ ನಿರ್ವಹಣೆ ಮತ್ತು ದುರಸ್ತಿ ಮಾಡುವಲ್ಲಿ ಲೆಕ್ಕಶೀರ್ಷಿಕೆ 2055 ಪೋಲೀಸ್ ವಸತಿಗೃಹ ಅಡಿಯಲ್ಲಿ ರೂ. 36.00 ಲಕ್ಷಗಳ ಅನುದಾನ ಲಭ್ಯವಿರುವುದು ಗಮನಕ್ಕೆ ಬಂದಿದೆ. ಈ ಅನುದಾನವನ್ನು ಲೋಕೋಪಯೋಗಿ ಇಲಾಖೆಗೆ ಒದಗಿಸಲು ಕೋರಿದೆ. ಈ ಕಾಮಗಾರಿಗಳನ್ನು ಲೋಕೋಪಯೋಗಿ ಇಲಾಖೆ ವತಿಯಿಂದ ಕೂಡಲೇ ಕೈಗೊಳ್ಳಲಾಗುವುದು.

ಶಿಡ್ಲಘಟ್ಟ ತಾಲ್ಲೂಕಿನಲ್ಲಿ ಪಶುವೈದ್ಯಕೀಯ ಆಸ್ಪತ್ರೆಗಳ ಕಟ್ಟಡಗಳು.

560: (3915)

ಶ್ರೀ ವಿ.ಮುನಿಯಪ್ಪ (ಶಿಡ್ಲಘಟ್ಟ): ಮಾನ್ಯ ಪಶುಸಂಗೋಪನಾ ರಾಜ್ಯ ಸಚಿವರು. ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಶಿಡ್ಲಘಟ್ಟ ತಾಲ್ಲೂಕು ಬಸ್ಸೆಟ್ಟಿಹಳ್ಳಿ ಗ್ರಾಮ ಪಂಚಾಯತಿ ಕೇಂದ್ರದಲ್ಲಿ ಸ್ಥಳೀಯ ನಿವಾಸಿಗಳೊಬ್ಬರು ಪಶುವೈದ್ಯಕೀಯ ಆಸ್ಪತ್ರೆಗೆ ನೂತನ ಕಟ್ಟಡವನ್ನು ದಾನದ ರೂಪದಲ್ಲಿ ಕಟ್ಟಿಸಿ ಕೊಟ್ಟಿರುವುದು ಸರಕಾರದವರ ಗಮನಕ್ಕೆ ಬಂದಿದೆಯೇ;

ಆ) ಹಾಗಿದ್ದಲ್ಲಿ ಅಲ್ಲಿ ಪಶುವೈದ್ಯ ಆಸ್ಪತ್ರೆಯನ್ನು ಪ್ರಾರಂಭ ಮಾಡಲು ಬೇಡಿಕೆ ಇರುವುದು ಸರ್ಕಾರದವರ ಗಮನಕ್ಕೆ ಬಂದಿದೆಯೇ?

ಇ) ಬಂದಿದ್ದಲ್ಲಿ ಅದನ್ನು ಯಾವಾಗ ಪ್ರಾರಂಭಿಸಲಾಗುವುದು?

ಶ್ರೀ ಬಿ.ಬಿ.ನಿಂಗಯ್ಯ (ಪಶುಸಂಗೋಪನಾ ರಾಜ್ಯ ಸಚಿವರು):

ಅ) ಹೌದು

ಆ) ಹೌದು

ಇ) 98-99 ಸಾಲಿನಲ್ಲಿ ಪರಿಗಣಿಸಲಾಗುವುದು.

ಗೌರಿಬಿದನೂರಿನಲ್ಲಿ ಜ್ಯೂಡಿಷಿಯಲ್ ನ್ಯಾಯಾಲಯ ಕಟ್ಟಡದ ನಿರ್ಮಾಣ.

561:(4027)